ಓಎಸ್. 138/2016
ಡಿಡಬ್ಲ್ಯೂ-1

ದಿನಾಂಕ 29-10-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಮಾಡಿಸಲಾಯಿತು.

ಪಾಟೀ ಸವಾಲುಃ- ವಾದಿ ಪರ ವಕೀಲರಿಂದಃ-

ವಾದಿಗೆ 8 ಎಕರೆ ಪ್ಲಾಂಟೇಷನ್ ಜಮೀನು ಇದೆ ಎಂದರೆ ನಿಜ. ಅದರಲ್ಲಿ ಕಾಫಿತೋಟ 5 ಎಕರೆ ಇದೆ ಎಂದರೆ ನಿಜ. ಡಿಸೆಂಬರ್ ತಿಂಗಳು ಕಾಫಿಯ ಕೊಯಿಲಿನ ಸಮಯ ಎಂದರೆ ನಿಜ. ಆ ಸಮಯದಲ್ಲಿ ಕೆಲಸಗಾರರು, ಉಪಕರಣಗಳು ಮತ್ತು ವಾಹನಗಳ ಅವಶ್ಯಕತೆ ಇದೆ ಎಂದರೆ ನಿಜ. ಕಾಫಿಯ ಕೊಯಿಲಿನ ಸಮಯದಲ್ಲಿ ಸರಿಯಾದ ರೀತಿಯಲ್ಲಿ ನೋಡಿಕೊಂಡು ಬೆಳೆ ಕಟಾವು ಮಾಡಲಿಲ್ಲ ಎಂದರೆ ನಷ್ಟ ಆಗುತ್ತದೆ ಎಂದರೆ ನಿಜ.

ವಾದಿ ನನ್ನ ಅಣ್ಣನ ಮಗ. ವಾದಿಯ ತಂದೆಯ ವಿರುದ್ಧ ಮಡಿಕೇರಿ ಸಿವಿಲ್ ನ್ಯಾಯಾಲಯದಲ್ಲಿ ದಾರಿಯ ಹಕ್ಕು ಮತ್ತು ಮನೆಯ ವಿಭಾಗಕ್ಕೆ ದಾವೆ ಹೂಡಿದ್ದೇನೆ ಎಂದರೆ ನಿಜ. ಆ ತೀರ್ಪಿನ ವಿರುದ್ಧ ಜಿಲ್ಲಾ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದೇನೆ ಎಂದರೆ ನಿಜ. ಪೂರ್ವಜರ ಮನೆಯಲ್ಲಿ ವಾಸ ಮಾಡಲು ನನಗೆ ಅವಕಾಶ ಸಿಗದೆ ಇರುವ ಕಾರಣ ನನಗೆ ಹಗೆತನ ಬೆಳೆದಿದೆ ಎಂದರೆ ಸರಿಯಲ್ಲ. ವಾದಿಯ ವಿರುದ್ಧ ನಾನು ಜೀಪು ಹತ್ತಿಸಿ ನನ್ನನ್ನು ಕೊಲ್ಲಲು ಪ್ರಯತ್ನಪಟ್ಟ ಪ್ರಕರಣ ಹಾಕಿದ್ದೇನೆ ಎಂದರೆ ನಿಜ. ಸದರಿ ಪ್ರಕರಣ ಖುಲಾಸೆಯಾಗಿದೆ ಎಂದರೆ ನಿಜ. ಸದರಿ ಕ್ರಿಮಿನಲ್ ಪ್ರಕರಣದಲ್ಲಿ ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಒಪ್ಪಿದ್ದರಿಂದ ಅದನ್ನು ನಿಪಿ-9 ಎಂದು ಗುರುತಿಸಲಾಯಿತು. ಸದರಿ ತೀರ್ಪಿನ ವಿರುದ್ಧ ನಾನು ಮೇಲ್ಮನವಿ ಸಲ್ಲಿಸಿಲ್ಲ. ಸದರಿ ತೀರ್ಪನ್ನು ನಾನು ತಿಳಿದುಕೊಂಡಿದ್ದೇನೆ. ಸದರಿ ತೀರ್ಪಿನಲ್ಲಿ ನಾನು ವೈಯುಕ್ತಿಕ ದ್ವೇಷಕ್ಕಾಗಿ ಪ್ರಕರಣ ದಾಖಲು ಮಾಡಿದ್ದೇನೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ ಎಂದರೆ ಸರಿಯಲ್ಲ. ಸದರಿ ತೀರ್ಪಿನ ಖಂಡಿಕೆ 28, 35ರಲ್ಲಿ ನಾನು ನ್ಯಾಯಾಲಯಕ್ಕೆ ಸುಳ್ಳು ಮಾಹಿತಿಯನ್ನು ಕೊಟ್ಟಿದ್ದೇನೆ ನಾನು ನಂಬಲು ಅನರ್ಹ ಎಂದು ಅಭಿಪ್ರಾಯ ಪಟ್ಟಿದೆ ಎಂದರೆ ಗೊತ್ತಿಲ್ಲ. ಸದರಿ ಅಭಿಪ್ರಾಯವನ್ನು ನಾನು ಬೇರೆ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ. ಸದರಿ ತೀರ್ಪಿನ ಖಂಡಿಕೆ ವಿರುದ್ಧ ನಾನು ಬೇರೆ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವೇಳೆ ಕೇಳಲಾಗಿ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೇ ಸ ಇ ಎ ಒ.

ಸಹಿಃ

ಹಿರಿಯ ಸಿವಿಲ್ ನ್ಯಾಯಾಧೀಶರು

ಓಎಸ್. 138/2016
ಡಿಡಬ್ಲ್ಯೂ-1

ಮತ್ತು ಪ್ರಧನ್ಯಾಯದಂಃ ವಿರಾಜಪೇಟೆ.

(ಸಾಕ್ಷಿದಾರರ ಸಹಿ)